ಅಮೆರಿಕ ಮೂಲದ ನೆಸ್ಟ್ಲಿಂಗ್ ಸಂಸ್ಥೆಯ ಕೌನ್ಸೆಲಿಂಗ್ ಕೇಂದ್ರ ಆರಂಭ

ಉನ್ನತ ಶಿಕ್ಷಣಕ್ಕೆ ಕೌನ್ಸೆಲಿಂಗ್: 2.5 ಲಕ್ಷ ಡಾಲರ್ ವಿದ್ಯಾರ್ಥಿವೇತನ

ಬೆಂಗಳೂರು: ಉನ್ನತ ಶಿಕ್ಷಣಕ್ಕೆ ಕೌನ್ಸೆಲಿಂಗ್ ಪಡೆಯುವ ವಿದ್ಯಾರ್ಥಿಗಳಿಗೆ 2.5 ಲಕ್ಷ ಡಾಲರ್ ವಿದ್ಯಾರ್ಥಿ ವೇತನವನ್ನು ನೆಸ್ಟ್ಲಿಂಗ್ ಸಂಸ್ಥೆ ಘೋಷಿಸಿದೆ.

ಗುರುವಾರ ನಗರದಲ್ಲಿ ಅಮೆರಿಕ ಮೂಲದ ನೆಸ್ಟ್ಲಿಂಗ್ ಸಂಸ್ಥೆ ಕೌನ್ಸೆಲಿಂಗ್ ಕೇಂದ್ರವನ್ನು ತೆರೆದಿದ್ದು ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್.ಅಶ್ವತ್ಥನಾರಾಯಣ್ ಅವರು ಚಾಲನೆ ನೀಡಿದರು.

ಈ ವೇಳೆ ಪದವಿ ಉತ್ತೀರ್ಣರಾದ ವಿದ್ಯಾರ್ಥಿಗಳಿಗೆ ಉನ್ನತ ಶಿಕ್ಷಣದ ಕುರಿತು ಉಚಿತವಾಗಿ ಮಾರ್ಗದರ್ಶನ ಹಾಗೂ ಉನ್ನತ ಮಟ್ಟದ ಕಾಲೇಜುಗಳಿಗೆ ದಾಖಲಾತಿಗೆ ಕೌನ್ಸೆಲಿಂಗ್ ಅನ್ನು ಇ ಸಂಸ್ಥೆ ನೀಡಲಿದೆ. ಅಲ್ಲದೇ ಈ ಕೇಂದ್ರಲ್ಲಿ ಕೌನ್ಸೆಲಿಂಗ್ ಪಡೆಯುವ ವಿದ್ಯಾರ್ಥಿಗಳಿಗೆ 2.5 ಲಕ್ಷ ಡಾಲರ್ ಸ್ಕಾಲರ್‌ಶಿಪ್ ನೀಡುವುದಾಗಿಯೂ ಘೋಷಿಸಿದೆ.

ಉದ್ಘಾಟನೆ ಬಳಿಕ ಮಾತನಾಡಿದ ಉನ್ನತ ಶಿಕ್ಷಣ ಸಚಿವ ಡಾ.ಅಶ್ವತ್ಥನಾರಾಯಣ್, ಪದವಿ ಮುಗಿಸಿದ ಬಳಿಕ ವಿದ್ಯಾರ್ಥಿಗಳಿಗೆ ಉನ್ನತ ಶಿಕ್ಷಣದ ಬಗ್ಗೆ ಸಾಕಷ್ಟು ಗೊಂದಲ ಹಾಗೂ ಮಾಹಿತಿ ಕೊರತೆ ಇರುತ್ತದೆ.

ನೆಸ್ಟ್ಲಿಂಗ್ ಕೇಂದ್ರವು ಉನ್ನತ ಶಿಕ್ಷಣದಲ್ಲಿ ಯಾವ ಕೋರ್ಸ್‌ಗಳಿಗೆ ದಾಖಲಾಗಬಹುದು, ಎಜುಕೇಷನ್ ಲೋನ್, ಇಂಟರ್ನ್ ಶಿಪ್, ವಿದ್ಯಾರ್ಥಿವೇತನ ಇತ್ಯಾದಿ ಬಗ್ಗೆ ಸಂಪೂರ್ಣ ನೆರವು ಹಾಗೂ ಮಾರ್ಗದರ್ಶನ ನೀಡಲಿದೆ. ಅದರಲ್ಲೂ ವಿದೇಶದಲ್ಲಿ ವ್ಯಾಸಂಗ ಮಾಡುವ ವಿದ್ಯಾರ್ಥಿಗಳಿಗೆ ವೀಸಾ ನೆರವು ಸೇರಿದಂತೆ ಇತರೆ ಕೌನ್ಸೆಲಿಂಗನ್ನು ಈ ಕೇಂದ್ರ ನೀಡುತ್ತಿರುವುದು ಶ್ಲಾಘನೀಯ ಎಂದರು.

ವಿದ್ಯಾರ್ಥಿಗಳಿಗೆ ಉಚಿತ ಕೌನ್ಸೆಲಿಂಗ್ ನೀಡಿ: ವಿಟಿಯು ಉಪಕುಲಪತಿ ಡಾ.ಕರಿಸಿದ್ದಪ್ಪ ಮಾತನಾಡಿ, ನೆಸ್ಟ್ಲಿಂಗ್ ಕೇಂದ್ರದ ಉದ್ದೇಶ ಹೆಚ್ಚು ಪ್ರಶಂಸನೀಯ. ಉನ್ನತ ಶಿಕ್ಷಣದ ಬಗ್ಗೆ ಕನಸು ಕಂಡಿರುವ ವಿದ್ಯಾರ್ಥಿಗಳಿಗೆ ಉಚಿತವಾಗಿ ಕೌನ್ಸೆಲಿಂಗ್ ನೀಡಿ, ವಿಶ್ವವಿದ್ಯಾಲಯಗಳಲ್ಲಿ ದಾಖಲಾತಿ ಕೊಡಿಸುತ್ತಿರುವ ಇವರ ಸೇವೆ ಉತ್ತಮವಾಗಿದೆ ಎಂದರು. ನೆಸ್ಟ್ಲಿಂಗ್ ಸಂಸ್ಥೆ ಸಂಸ್ಥಾಪಕ ರಾಜಶೇಖರ್ ಬಸವರಾಜು, ಉನ್ನತ ಶಿಕ್ಷಣ ಹಾಗೂ ವೃತ್ತಿಪರ ಕೋರ್ಸ್‌ಗೆ ಸೇರಲು ವಿದ್ಯಾರ್ಥಿಗಳು ಹೆಚ್ಚು ಆಸಕ್ತಿ ಹೊಂದಿರುತ್ತಾರೆ, ಆದರೆ ಅವರಿಗೆ ಸೂಕ್ತ ಮಾರ್ಗದರ್ಶನದ ಕೊರತೆ ಇದೆ. ಈ ನಿಟ್ಟಿನಲ್ಲಿ ನಮ್ಮ ಕೇಂದ್ರ ಉಚಿತವಾಗಿ ಸೇವೆ ನೀಡಲು ಬದ್ಧವಾಗಿದೆ.

ಈಗಾಗಲೇ ಅಮೆರಿಕಾದಲ್ಲಿ ಈ ರೀತಿಯ ಕೇಂದ್ರ ತೆರೆದಿದ್ದು, 50 ಸಾವಿರಕ್ಕೂ ಹೆಚ್ಚು ವಿದ್ಯಾರ್ಥಿಗಳಿಗೆ ಕೌನ್ಸೆಲಿಂಗ್ ನೀಡಿ 300ಕ್ಕೂ ಹೆಚ್ಚು ಪ್ರತಿಷ್ಠಿತ ವಿಶ್ವವಿದ್ಯಾಲಯದಲ್ಲಿ ದಾಖಲಾತಿ ನೀಡಲಾಗಿದೆ. ಜೊತೆಗೆ ಅಲ್ಲಿಯೂ ವಿದ್ಯಾರ್ಥಿಗಳಿಗೆ ಸ್ಕಾಲರ್‌ಶಿಪ್ ನೀಡಲಾಗಿದೆ. ಆಗ್ನೇಯ ಏಷ್ಯಾದ ಅತಿದೊಡ್ಡ ವಿದ್ಯಾರ್ಥಿ ಲೋನ್ ಕೊಡಿಸುವ ಜವಾಬ್ದಾರಿಯನ್ನು ನಾವು ಹೊಂದಿದ್ದೇವೆ ಎಂದರು.

nestlings
INDIA LAUNCH
BENGALURU
25TH NOVEMBER 2021
COLLEGE
CAREER

ಮೊದಲು ಅರ್ಜಿ ಸಲ್ಲಿಸುವವರಿಗೆ ಆದ್ಯತೆ

ಮೊದಲು ಅರ್ಜಿ ಸಲ್ಲಿಸುವ ಆಯ್ದ ವಿದ್ಯಾರ್ಥಿಗಳಿಗೆ ಒಟ್ಟು 2,50,000 ಡಾಲರ್ ವಿದ್ಯಾರ್ಥಿ ವೇತನ ನೀಡಲು ನಿರ್ಧರಿಸಿದೆ. ಜೊತೆಗೆ ಮೊದಲು ನೋಂದಾಯಿತ 100 ವಿದ್ಯಾರ್ಥಿಗಳಿಗೆ ಇಂಟರ್ ನ್ಯಾಷನಲ್ ಇಂಗ್ಲಿಷ್ ಲಾಂಗ್ವೇಜ್ ಟೆಸ್ಟಿಂಗ್ ಸಿಸ್ಟಮ್ ಹಾಗೂ ಗ್ರಾಜುವೇಟ್ ರೆಕಾರ್ಡ್ ಎಗ್ಸಾಮಿನೇಷನ್ ತರಬೇತಿಯನ್ನು ಉಚಿತವಾಗಿ ನೀಡಲಾಗುತ್ತದೆ.

ಎನ್‌ಇಪಿ: ಪ್ರತಿ ಕಲಿಕೆಯೂ ಪರೀಕ್ಷೆ

ಬೆಂಗಳೂರು: ನೂತನ ಶಿಕ್ಷಣ ನೀತಿ (ಎನ್‌ಇಪಿ)ಯಡಿಯಲ್ಲಿ ಕಲಿಯುವ ಪ್ರತಿಯೊಂದು ಅವಧಿಯೂ ಪರೀಕ್ಷೆಯೇ ಆಗಿರುತ್ತದೆ ಎಂದು ಬೆಂಗಳೂರು ವಿಶ್ವವಿದ್ಯಾಲಯದ ಕುಲಪತಿ ಪ್ರೊ . ಕೆ.ಆರ್.ವೇಣುಗೋಪಾಲ್ ಹೇಳಿದರು.

ಬೆಂಗಳೂರು ವಿಶ್ವವಿದ್ಯಾಲಯದ ಪ್ರದರ್ಶನ ಕಲಾ ವಿಭಾಗದಿಂದ ಭಾರತ ಸ್ವಾತಂತ್ರ್ಯದ ಅಮೃತ ಮಹೋತ್ಸವದ ಅಂಗವಾಗಿ ಎರಡು ದಿನಗಳ ವಿದ್ಯಾರ್ಥಿ ನಾಟಕೋತ್ಸವದಲ್ಲಿ ಅವರು ಮಾತನಾಡಿದರು.

ನೂತನ ರಾಷ್ಟ್ರೀಯ ಶಿಕ್ಷಣ ನೀತಿಯ ಶಿಕ್ಷಣದಲ್ಲಿ ಪರೀಕ್ಷೆಗಳಿಗಿಂತ ಹೆಚ್ಚಾಗಿ ಆ ವಿದ್ಯಾರ್ಥಿಗಳು ಆಸಕ್ತಿಯಿಂದ ಶಿಕ್ಷಣವನ್ನು ಕಲಿಯುವುದರ ಕಡೆ ಹೆಚ್ಚು ಗಮನ ಹರಿಸಲಾಗಿದೆ. ವಿದ್ಯಾರ್ಥಿಗಳ ಪ್ರತಿಯೊಂದು ಕಲಿಕಾ ಅವಧಿಯೂ ಪರೀಕ್ಷೆಯೇ ಆಗಿರುತ್ತದೆ. ಅದರಲ್ಲೂ ಪ್ರದರ್ಶನ ಕಲಾ ವಿಭಾಗ ಕೊರೋನಾ ಸಂದರ್ಭದಿಂದಲೂ ಆನ್‌ಲೈನ್ ಹಾಗೂ ಆಫ್‌ಲೈನ್ ಎರಡು ರೀತಿಯಲ್ಲೂ ಅತ್ಯುತ್ತಮ ಕಾರ್ಯವನ್ನು ನಿರ್ವಹಿಸುತ್ತಾ ಬಂದಿದೆ. ಜಾಗತಿಕ ಮಟ್ಟದಲ್ಲಿ 249ನೇ ಸ್ಥಾನವನ್ನು ಬೆಂಗಳೂರು ವಿಶ್ವವಿದ್ಯಾಲಯ ಪಡೆದಿದೆ. ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಕಲಿತ ವಿದ್ಯಾರ್ಥಿಗಳಿಗೆ ಹೆಚ್ಚಿನ ಉದ್ಯೋಗಾವಕಾಶಗಳು ದೊರಕುತ್ತಿವೆ ಎಂದರು.

ಡಾ.ಎಲ್.ನಾಗಭೂಷಣರಾವ್, ಪ್ರದರ್ಶನ ಕಲಾ ವಿಭಾಗದ ಮುಖ್ಯಸ್ಥೆ ಪ್ರೊ. ಹಂಸಿನಿ ನಾಗೇಂದ್ರ, ಪ್ರಾಧ್ಯಾಪಕರಾದ ಡಾ.ಎಸ್.ಎನ್.ಸುಶೀಲ, ಡಾ.ಎಸ್.ಶಿವಣ್ಣ ಮತ್ತಿತರರಿದ್ದರು.

ಹೊಸ ನಾಟಕಗಳ ಸೃಷ್ಟಿ

ಗಂಗೂಭಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿವಿ ಕುಲಪತಿ ಪ್ರೊ.ನಾಗೇಶ್ ಬೆಟ್ಟಕೋಟೆ ಮಾತನಾಡಿ, ಹಿಂದಿನಂತೆ ನೃತ್ಯ, ನಾಟಕ ಮತ್ತು ಸಂಗೀತ ಕಲೆಗಳೆಂದರೆ ಉದ್ಯೋಗವಿಲ್ಲದವರು ಎಂಬ ಭಾವನೆ ಮತ್ತು ಮಾತು ಈಗ ಮಾಯವಾಗುತ್ತಿದೆ. ಎಲ್ಲಾ ರಂಗದಲ್ಲೂ ಉದ್ಯೋಗವಿದೆ ಎಂಬುದು ಪ್ರದರ್ಶನ ಕಲಾ ವಿಭಾಗ ತೋರಿಸಿಕೊಟ್ಟಿದೆ. ನಾಟಕ ಪ್ರದರ್ಶನಗಳು ಹೆಚ್ಚು ಹೆಚ್ಚಾಗಿ ಪ್ರದರ್ಶನವಾದಲ್ಲಿ, ಹೊಸ ಹೊಸ ನಾಟಕಗಳ ಸೃಷ್ಟಿ ಹಾಗೂ ನಿರ್ದೇಶಕರು ಹುಟ್ಟಿಕೊಳ್ಳುತ್ತಾರೆ ಎಂದರು.

ಮೆಟ್ರೋ ಕಾಸ್ಟ್ ನೆಟ್‌ವರ್ಕ್ ಕಚೇರಿಗೆ ಸಿಎಂ ಚಾಲನೆ

METROCAST
NETWORK INDIA PRIVATE LIMITED
VENTURES
BROAD

ಬೆಂಗಳೂರು: ಮಾಧವನಗರದಲ್ಲಿನ ಕೆಸಿಎನ್ ಭವನದಲ್ಲಿ ಮೆಟ್ರೋ ಕಾಸ್ಟ್ ನೆಟ್ ವರ್ಕ್ ಇಂಡಿಯಾ ಪ್ರೈ ಲಿ. ನೂತನ ಕಚೇರಿಯನ್ನು ಗುರುವಾರ ಸಿಎಂ ಬಸವರಾಜ ಬೊಮ್ಮಾಯಿ ಉದ್ಘಾಟಿಸಿದರು.

ಮೆಟ್ರೋ ಕಾಸ್ಟ್ ಮೂರು ದಶಕಗಳಿಗಿಂತ ಹೆಚ್ಚು ಕೇಬಲ್ ಸೇವೆ ಒದಗಿಸುತ್ತಿರುವ ಸಂಸ್ಥೆಯಾಗಿದ್ದು, ಉತ್ತರ ಕರ್ನಾಟಕ, ಮಹಾರಾಷ್ಟ್ರ, ಗೋವಾದಲ್ಲಿ ತನ್ನ ನೆಟ್‌ವರ್ಕ್‌ಅನ್ನು ಸ್ಥಾಪಿಸಿದೆ. ಅದರೊಂದಿಗೆ ಇನ್ನು ಮುಂದೆ ಬೆಂಗಳೂರನ್ನು ಮೂಲ ಸ್ಥಾನವನ್ನಾಗಿಸುವ ಯೋಜನೆಯೂ ಇದೆ. ಈಗಾಗಲೇ 5 ಲಕ್ಷಕ್ಕೂ ಹೆಚ್ಚು ಗ್ರಾಹಕರನ್ನು ಹೊಂದಿದ್ದು, ಇನ್ನು ಮುಂದಿನ ದಿನಗಳಲ್ಲಿ ಹೆಚ್ಚಿನ ರಿಯಾಯಿತಿಯೊಂದಿಗೆ ಎಲ್ಲರೆದುರು ಬರಲಿದೆ ಎಂದು ಸಂಸ್ಥೆಯ ಮಾಲಿಕ ನಾಗೇಶ್ ಚಾಬ್ರಿಯಾ ಹೇಳಿದರು.

ನಿಶಾ ಚಾಬ್ರಿಯಾ, ಶಾಸಕ ರಿಜ್ವಾನ್ ಅರ್ಷದ್ ಮತ್ತಿತರರಿದ್ದರು.

ಸಿಡಿ ಪ್ರಕರಣ: ಪೊಲೀಸ್ ಆಯುಕ್ತರ ತನಿಖೆಗೆ ತಡೆ

ಬೆಂಗಳೂರು: ಮಾಜಿ ಸಚಿವ ರಮೇಶ್ ಜಾರಕಿಹೊಳಿ ಅವರ ಸಿಡಿ ಪ್ರಕರಣ ಬೆಳಕಿಗೆ ಬಂದ ವೇಳೆ ಯುವತಿ ಪರವಾಗಿ ದಿನೇಶ್ ಕಲ್ಲಹಳ್ಳಿ ಸಲ್ಲಿಸಿದ್ದ ದೂರಿನ ಮೇರೆಗೆ ಎಫ್‌ಐಆರ್ ದಾಖಲಿಸದಿದ್ದಕ್ಕೆ ನಗರ ಪೊಲೀಸ್ ಆಯುಕ್ತರ ವಿರುದ್ಧ ತನಿಖೆಗೆ ಆದೇಶಿಸಿದ್ದ ಮ್ಯಾಜಿಸ್ಟ್ರೇಟ್ ಕೋರ್ಟ್ ಆದೇಶಕ್ಕೆ ಹೈಕೋರ್ಟ್ ತಡೆ ನೀಡಿದೆ.

ತಮ್ಮ ವಿರುದ್ಧ ತನಿಖೆಗೆ ನಿರ್ದೇಶಿಸಿರುವ ಮ್ಯಾಜಿಸ್ಟ್ರೇಟ್ ಕೋರ್ಟ್ ಆದೇಶವನ್ನು ರದ್ದುಪಡಿಸಬೇಕು ಎಂದು ಕೋರಿ ನಗರ ಪೊಲೀಸ್ ಆಯುಕ್ತ ಕಮಲ್ ಪಂತ್ ಸೇರಿ ಮೂವರು ಅಧಿಕಾರಿಗಳು ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ನ್ಯಾಯಾಧೀಶ ಶ್ರೀನಿವಾಸ್ ಹರೀಶ್ ಕುಮಾರ್ ಅವರಿದ್ದ ಪೀಠ ಆದೇಶ ಮಾಡಿದೆ.

ವಿಚಾರಣೆ ವೇಳೆ ಅರ್ಜಿದಾರರ ಪರ ವಕೀಲರಾದ ಪ್ರಸನ್ನಕುಮಾರ್ ವಾದ ಮಂಡಿಸಿ, ಪ್ರಕರಣಕ್ಕೆ ಸಂಬಂಧಿಸಿದಂತೆ ಮಾಜಿ ಸಚಿವ ರಮೇಶ್ ಜಾರಕಿಹೊಳಿ ವಿರುದ್ಧ ತನಿಖೆ ನಡೆಸಿದ್ದು, ಅಂತಿಮ ವರದಿ ಸಲ್ಲಿಸಲು ಎಸ್‌ಐಟಿ ಸಿದ್ಧವಿದೆ. ಹೀಗಾಗಿ ಮ್ಯಾಜಿಸ್ಟ್ರೇಟ್ ಕೋರ್ಟ್ ತನಿಖೆ ನಡೆಸಲು ನೀಡಿರುವ ಆದೇಶಕ್ಕೆ ತಡೆ ನೀಡಬೇಕು ಎಂದು ಕೋರಿದ್ದನ್ನು ಪರಿಗಣಿಸಿದ ಪೀಠ ಮಧ್ಯಂತರ ತಡೆ ನೀಡಿದೆ.

ಬಿಡಿಎ: ಬಗೆದಷ್ಟು ಅಕ್ರಮ ಬಯಲು

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಬಿಡಿಎ) ಕಚೇರಿ ಹಾಗೂ ಉಪ ಕಚೇರಿಗಳ ಮೇಲೆ ಗುರುವಾರ ಸಹ ಎಸಿಬಿ ದಾಳಿ ಮುಂದುವರೆಸಿದ್ದಾರೆ. ದಾಖಲಾತಿಗಳ ಪರಿಶೀಲನೆ ನಡೆಯುತ್ತಿದ್ದು, ಅಕ್ರಮ ವ್ಯವಹಾರಗಳ ಜಾಡನ್ನು ಭೇದಿಸುತ್ತಿದ್ದಾರೆ. ಕೆಲ ದಿನಗಳ ಹಿಂದೆ ಕೇಂದ್ರ ಕಚೇರಿ ಹಾಗೂ ಉಪ ಕಚೇರಿಗಳ ಮೇಲೆ ದಾಳಿ ಮಾಡಿ ಮಹತ್ವದ ದಾಖಲಾತಿಗಳನ್ನು ಎಸಿಬಿ ಅಕಾರಿಗಳು ವಶಕ್ಕೆ ಪಡೆದಿದ್ದರು. ಈ ವೇಳೆ ಹಲವು ಅಕ್ರಮ ಎಸಗಿರುವುದು ಪತ್ತೆಯಾಗಿತ್ತು. ಒಂದೇ ನಿವೇಶನವನ್ನು ಮೂರ್ನಾಲ್ಕು ಜನಕ್ಕೆ ಮಂಜೂರು ಮಾಡಿ ಮೂಲ ಮಾಲೀಕರಿಗೆ ನಿವೇಶನ ಹಂಚದೆ ವಂಚನೆ, ಕಾರ್ನರ್ ಸೈಟ್ ಹಂಚಿಕೆಯಲ್ಲಿ ಅಕ್ರಮ ಹೀಗೆ ಹಲವು ರೀತಿಯ ಹಗರಣ ನಡೆದಿರುವುದು ಬೆಳಕಿಗೆ ಬಂದಿತ್ತು. ದಾಖಲಾತಿ ಮುಂದಿಟ್ಟು ಅಧಿಕಾರಿಗಳು, ಸಿಬ್ಬಂದಿಯನ್ನು ವಿಚಾರಣೆ ನಡೆಸಿದ ಎಸಿಬಿ ಅಕಾರಿಗಳು, ಮತ್ತಷ್ಟು ದಾಖಲಾತಿಗಾಗಿ ಗುರುವಾರ ಬಿಡಿಎ ಕಚೇರಿ ಹಾಗೂ ಉಪ ಕಚೇರಿಗಳ ಮೇಲೆ ದಾಳಿ ಮಾಡಿ ಪರಿಶೀಲನೆ ಮುಂದುವರಿಸಿದ್ದಾರೆ.



ಟೆಸ್ಟ್ ಡ್ರೈವ್ ನೆಪದಲ್ಲಿ ಕಾರು ಕಳ್ಳತನ

ಬೆಂಗಳೂರು: ಕಾರು ಖರೀದಿಸುವ ಸೋಗಿನಲ್ಲಿ ಬಂದು ಟೆಸ್ಟ್ ಡ್ರೈವ್ ಮಾಡುವ ನೆಪದಲ್ಲಿ ಕಾರು ಕದ್ದು ಪರಾರಿಯಾಗಿದ್ದ ಆರೋಪಿಯನ್ನು ಮಹಾಲಕ್ಷ್ಮೀ ಲೇಔಟ್ ಪೊಲೀಸರು ಬಂಧಿಸುವಲ್ಲಿ ಯಶಸ್ವಿಯಾಗಿದ್ದಾರೆ.

ದೊಡ್ಡಬಳ್ಳಾಪುರ ನಿವಾಸಿ ಶ್ರೀನಿವಾಸ್ ಬಂಧಿತ ಆರೋಪಿ. ಈತ ಮಾರಾಟಕ್ಕಿಟ್ಟಿದ್ದ ಕಾರುಗಳನ್ನು ಖರೀದಿಸುವ ನೆಪದಲ್ಲಿ ಬಂದು ಟೆಸ್ಟ್ ಡ್ರೈವ್‌ಗೆಂದು ಕಾರುಗಳನ್ನು ತೆಗೆದುಕೊಂಡು ಹೋಗುತ್ತಿದ್ದ. ಬಳಿಕ ಮೊಬೈಲ್ ಸ್ವಿಚ್ ಆಫ್ ಮಾಡಿಕೊಂಡು ವಂಚನೆ ಮಾಡುತ್ತಿದ್ದ. ಇದೇ ರೀತಿ ಮಹಾಲಕ್ಷ್ಮೀ ಲೇಔಟ್‌ನ ಇಟಿ ಯೋಸ್ ಕಾರೊಂದನ್ನು ಟೆಸ್ಟ್ ಡ್ರೈವ್ ಮಾಡುವ ನೆಪದಲ್ಲಿ ಕೊಂಡೊಯ್ದಿದ್ದ. ಈ ಸಂಬಂಧ ಮಹಾಲಕ್ಷ್ಮೀ ಲೇಔಟ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ಕೂಡ ದಾಖಲಾಗಿತ್ತು. ಕೇಸ್‌ಗೆ ಸಂಬಂಧಿಸಿದಂತೆ ಆರೋಪಿಗಾಗಿ ಹುಡುಕಾಟ ನಡೆಸಿದ ಪೊಲೀಸರು ಆತನನ್ನು ಬಂಧಿಸಿ ಕಂಬಿ ಹಿಂದೆ ತಳ್ಳಿದ್ದಾರೆ.

7 ಕಾರು ವಶಕ್ಕೆ: ಬಂಧಿತನ ವಿಚಾರಣೆ ವೇಳೆ ವಿವಿಧ ಠಾಣಾ ವ್ಯಾಪ್ತಿಯಲ್ಲಿ 35 ಲಕ್ಷ ರೂ. ಮೌಲ್ಯದ 7 ಕಾರುಗಳನ್ನು ಟೆಸ್ಟ್ ಡ್ರೈವ್ ನೆಪದಲ್ಲಿ ಕೊಂಡೊಯ್ದಿರುವುದು ಪತ್ತೆಯಾಗಿದೆ. ಸದ್ಯ ಮಹಾಲಕ್ಷ್ಮೀ ಲೇಔಟ್‌ನಲ್ಲಿ ಪ್ರಕರಣ ದಾಖಲಾಗಿದ್ದು, ಪೊಲೀಸರು ಹೆಚ್ಚಿನ ವಿಚಾರಣೆ ನಡೆಸುತ್ತಿದ್ದಾರೆ.

ಕನೆಕ್ಟೋ ಪ್ರೋ ಮೊಬೈಲ್ ಅಪ್ಲಿಕೇಶನ್‌ಗೆ ಚಾಲನೆ

ಬೆಂಗಳೂರು: ಉದ್ಯಮ ಹಾಗೂ ಮಾರುಕಟ್ಟೆ ವಲಯದಲ್ಲಿ ಕನೆಕ್ಟ್ ಪ್ರೋ ಮತ್ತು ಇನ್‌ಫ್ಲುಯೆನ್ಸ್ ಪ್ರೋ ಎಂಬ ಎರಡು ಕಾರ್ಯಕ್ರಮಕ್ಕೆ ಉನ್ನತ ಶಿಕ್ಷಣ ಸಚಿವ ಡಾ. ಸಿ.ಎನ್.ಅಶ್ವತ್ಥನಾರಾಯಣ ಹಾಗೂ ಮಾಜಿ ಸಿಎಂ ಸಿದ್ದರಾಮಯ್ಯ ಗುರುವಾರ ಚಾಲನೆ ನೀಡಿದರು.

ಕನೆಕ್ಟೋ ಪ್ರೋ ಮೊಬೈಲ್ ಅಪ್ಲಿಕೇಶನ್ ಆಗಿದ್ದು, ನವೋದ್ಯಮಗಳಿಗೆ ಇದು ವೇದಿಕೆ ಯಾಗಲಿದೆ. ತಮ್ಮ ಉತ್ಪನ್ನಗಳನ್ನು ನಿರ್ಧಿಷ್ಟ ವಲಯದ ಗ್ರಾಹಕರಿಗೆ ಉತ್ತೇಜಿಸಿ ಮಾರಾಟ ಮಾಡಲು ಈ ವೇದಿಕೆ ಸಹಾಯವಾಗಲಿದೆ. ಪ್ಯಾನ್ ಇಂಡಿಯಾ ಆಧಾರದ ಮೇಲೆ ಈ ವೇದಿಕೆಯನ್ನು ರೂಪಿಸಲಾಗಿದೆ. ಕನೆಕ್ಟೋ ಪ್ರೋ ಆ್ಯಪ್ ಪ್ಲೇ ಸ್ಟೋರ್‌ನಲ್ಲಿ ಇದು ಲಭ್ಯವಿದೆ.

ಸಣ್ಣ ಹಾಗೂ ಮಧ್ಯಮ ಉದ್ಯಮಗಳಿಗೆ ಸುಲಭ ದರದಲ್ಲಿ ತಮ್ಮ ಉತ್ಪನ್ನಗಳನ್ನು ಜಾಗತಿಕವಾಗಿ ಉತ್ತೇಜಿಸಲು, ಮಾರುಕಟ್ಟೆ ವಿಸ್ತರಣೆ ಮಾಡಲ, ವೈಯಕ್ತಿಕ ಬ್ರ್ಯಾಂಡಿಂಗ್ ಹೆಚ್ಚಿಸಿಕೊಳ್ಳಲು ಇದು ಪೂರಕವಾಗಿದೆ ಎಂದು ಸಚಿವರು ತಿಳಿಸಿದರು.

ಜಾಗತಿಕ ಸವಾಲಿಗೆ ಡಿಜಿಟಲ್ ಪರಿಹಾರ

ಬೆಂಗಳೂರು: ಜಾಗತಿಕಸವಾಲುಗಳಿಗೆ ಹೊಸ ಡಿಜಿಟಲ್ ಪರಿ ಹಾರಗಳನ್ನು ಕಂಡು ಕೊಳ್ಳಬೇಕು ಎಂದು ಐಟಿ-ಬಿಟಿ ಸಚಿವ ಡಾ.ಸಿ.ಎನ್.ಅಶ್ವತ್ಥ ನಾರಾಯಣ ಹೇಳಿದರು. ಆಕಾರ್ ಮ್ಯಾಕ್ಸ್ ಸಂಸ್ಥೆಯು ಅಭಿವೃದ್ಧಿಪ ಡಿಸಿ ರುವ ಕನೆಕ್ಟ್ ಪ್ರೊ ಮತ್ತು ದ ಇನ್ ಫ್ಲುಯೆನ್ಸ್ ಪ್ರೊ, ಡಿಜಿಟಲ್ ಉತ್ಪನ್ನಗಳನ್ನು ಬಿಡುಗಡೆಗೊಳಿಸಿ ಅವರು ಮಾತನಾಡಿ ದರು. ಭಾರತದ, ಅದರಲ್ಲೂ ಮುಖ್ಯವಾಗಿ ಕರ್ನಾಟಕದ ಉದ್ಯಮಶೀಲರು ಸ್ಥಳೀಯ ಹಾಗೂ ಜಾಗತಿಕ ಸವಾಲುಗಳಿಗೆ ಹೊಸ ಡಿಜಿಟಲ್ ಪರಿಹಾರಗಳನ್ನು ಅಭಿವೃದ್ಧಿಪಡಿಸುವುದರಲ್ಲಿ ಮುಂಚೂಣಿಗೆ ಬರಬೇಕು. ಈ ಉತ್ಪನ್ನಗಳನ್ನು ಮುಖ್ಯವಾಗಿ ಮಧ್ಯಮ ಮತ್ತು ಸಣ್ಣ ಕೈಗಾರಿಕಾ ವಲಯಗಳನ್ನು ಗಮನದಲ್ಲಿರಿಸಿಕೊಂಡು ರೂಪಿಸಲಾಗಿದೆ. ಜೊತೆಗೆ ವಕೀಲರು, ಎಂಜಿನಿಯರುಗಳು, ವೈದ್ಯರು, ಕಲಾವಿದರಿಗೆ ಕೂಡ ಇವನ್ನು ಬಳಸಬಹುದಾಗಿದೆ ಎಂದರು. ಸಾಮಾಜಿಕ ಜಾಲ ಖಾತೆಗಳ ನಿರ್ವಹಣೆ, ಗ್ರಾಫಿಕ್ ವಿನ್ಯಾಸ, ಗೂಗಲ್ ಮೈ ಬಿಜಿನೆಸ್, ಇ-ಬಿಜಿನೆಸ್, ಎಸ್‌ಎಂಎಸ್ ಮಾರ್ಕೆಟಿಂಗ್, ವರ್ಚ್ಯುಯಲ್ ಬಿಜಿನೆಸ್ ಇವೆಂಟ್ ಇತ್ಯಾದಿ ಸೇವೆಗಳನ್ನು ಈ ಉತ್ಪನ್ನಗಳ ಮೂಲಕ ಪಡೆಯಬಹುದು ಎಂದು ತಿಳಿಸಿದರು. ಮಾಜಿ ಸಿಎಂ ಸಿದ್ದರಾಮಯ್ಯ, ಕಂಪನಿಯ ಸಿಇಒ ಸ್ನೇಹಾ ರಾಕೇಶ್, ನಿರ್ದೇಶಕ ಎಸ್.ರಾಕೇಶ್, ಆರ್‌ವಿಜಿ ಟೆಕ್ ಪ್ರೈ. ಲಿ.ನ ಸಿಇಒ ರಜತ್ ವೆಂಕಟೇಶ್, ನಟ ರಮೇಶ್ ಅರವಿಂದ್, ನಟಿ ತಾರಾ ಮತ್ತಿತರರಿದ್ದರು.

ಠಾಣೆ ಮುಂದೆ 2 ಬಣಗಳ ವಾಕ್ಸಮರ

ಬೆಂಗಳೂರು: ಬಸವನಗುಡಿ ಪೊಲೀಸ್ ಠಾಣೆಯಲ್ಲಿ ಸಂಗೀತ ನಿರ್ದೇಶಕ ಹಂಸಲೇಖ ಗುರುವಾರ ವಿಚಾರಣೆಗೆ ಹಾಜರಾದ ಎರಡು ಬಣಗಳ ಮಧ್ಯೆ ಮಾತಿನ ಚಕಮಕಿ ನಡೆದು ಪ್ರತಿಭಟನೆಗೆ ದಾರಿಮಾಡಿಕೊಟ್ಟ ಘಟನೆ ಗುರುವಾರ ನಡೆಯಿತು.

ಹಂಸಲೇಖ ಹೇಳಿಕೆ ಖಂಡಿಸಿರುವ ಭಜರಂಗದಳ ಕಾರ್ಯಕರ್ತರು, ಕಪ್ಪು ಬಾವುಟ ಪ್ರದರ್ಶಿಸಿ ಠಾಣೆ ಮುಂದೆ ಪ್ರತಿಭಟನೆ ನಡೆಸಿದ್ದಾರೆ. ಮತ್ತೊಂದೆಡೆ ಎಡಪಂಥೀಯ ಸಂಘಟನೆಗಳೂ ಕೂಡಾ ಸ್ಥಳದಲ್ಲಿದ್ದು, ಪರ-ವಿರೋಧದ ಘೋಷಣೆಗಳನ್ನು ಕೂಗುತ್ತಿದ್ದರು.

ಯಾವುದೇ ಅಹಿತಕರ ಘಟನೆ ನಡೆಯದಂತೆ ನೋಡಿಕೊಳ್ಳಲು ಪೊಲೀಸರು ಬ್ಯಾರಿಕೇಡ್ ಹಾಕಿ, ಬಂದೋಬಸ್ತ್ ಮಾಡಿದ್ದು, ಪ್ರತಿಭಟನಾಕಾರರನ್ನು ನಿಯಂತ್ರಿಸಲು ಹರಸಾಹಸ ನಡೆಸಿದರು. ಇತ್ತೀಚೆಗೆ ಮೈಸೂರಿನ ಕಾರ್ಯಕ್ರಮದಲ್ಲಿ ಪೇಜಾವರ ಶ್ರೀಗಳ ವಿರುದ್ಧ ಹಂಸಲೇಖ ಆಕ್ಷೇಪಾರ್ಹವಾಗಿ ಮಾತನಾಡಿದ್ದರು. ಮಾತನಾಡಿದ ವಿಡಿಯೋ ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗುತ್ತಿದ್ದಂತೆ ವಿಪ್ರ ವೇದಿಕೆ ಈ ಹೇಳಿಕೆ ಖಂಡಿಸಿ ಬಸವನಗುಡಿ ಪೊಲೀಸ್ ಠಾಣೆಗೆ ದೂರು ನೀಡಿತ್ತು.

ಈ ಸಂಬಂಧ ವಿಚಾರಣೆಗೆ ಹಾಜರಾಗುವಂತೆ ಎರಡು ಬಾರಿ ನೋಟೀಸ್ ನೀಡಿದ್ದರು. ಅನಾರೋಗ್ಯದಿಂದ ಹಂಸಲೇಖ ಹಾಜರಾಗಿರಲಿಲ್ಲ. ಇಂದು ವಿಚಾರಣೆಗೆ ಆಗಮಿಸಿದ್ದು, ಜೊತೆಗೆ ನಟ ಚೇತನ್ ಕೂಡಾ ಪೊಲೀಸ್ ಠಾಣೆಗೆ ಬಂದಿದ್ದರು. ಚೇತನ್ ಹಾಗೂ ಭಜರಂಗ ದಳ ಕಾರ್ಯಕರ್ತರ ಮಧ್ಯೆಯೂ ಮಾತಿನ ಚಕಮಕಿ ನಡೆಯಿತು.

ಸತತ ಮಳೆ: ಗ್ರಾಹಕರ ಕೈ ಸುಡುವ ತರಕಾರಿ

ಬೆಂಗಳೂರು: ಬಂಗಾಳಕೊಲ್ಲಿಯಲ್ಲಿ ವಾಯುಭಾರ ಕುಸಿತದ ಪರಿಣಾಮದಿಂದ ಒಂದು ವಾರದ ನಿರಂತರವಾಗಿ ಸುರಿದ ಮಳೆಯಿಂದ ತರಕಾರಿ ಬೆಲೆ ಗಗನಕ್ಕೇರಿ, ಗ್ರಾಹಕರ ಕೈ ಸುಡುತ್ತಿದೆ.

ಕೊರೋನಾ ಕಾಲದಲ್ಲಿ ತರಕಾರಿ ಸರಿಯಾಗಿ ಪೂರೈಕೆ ಯಾಗದಿದ್ದಾಗ, ಅತಿ ಹೆಚ್ಚು ಬೆಲೆ ತೆತ್ತು ತರಕಾರಿ ಖರೀದಿ ಮಾಡಿದ್ದ ಸಾರ್ವಜನಿಕರು ಈಗ ಮಳೆ ಕಾರಣದಿಂದ ಹೆಚ್ಚು ಬೆಲೆ ತೆರಬೇಕಾಗಿದೆ. ನಗರದ ಎಲ್ಲ ಮಾರುಕಟ್ಟೆಗಳು ಸುತ್ತಮುತ್ತಲಿನ ಜಿಲ್ಲೆಗಳ ತರಕಾರಿ ಬೆಲೆಗಳನ್ನು ಅವಲಂಬನೆ ಮಾಡಿರುವುದರಿಂದ ನಗರಕ್ಕೆ ಸರಬರಾಜು ಆಗಬೇಕಿದ್ದ ತರಕಾರಿ ಪ್ರಮಾಣದಲ್ಲಿ ಇಳಿಮುಖವಾಗಿದ್ದರಿಂದ ಬೆಲೆ ಏರಿಕೆಯಾಗುತ್ತಿದೆ.

ಟೊಮೋಟೊ, ಈರುಳ್ಳಿ, ಸೊಪ್ಪು, ಹಿರೇಕಾಯಿ, ಹಸಿ ಮೆಣಸಿನಕಾಯಿ ಸೇರಿದಂತೆ ವಿವಿಧ ತರಕಾರಿಗಳ ದರ ದಿಢೀರ್ ಏರಿಕೆಯಾಗಿದೆ. ಕಾರ್ತಿಕ ಮಾಸದಲ್ಲಿ ಕಾರ್ಯಕ್ರಮಗಳೂ ಹೆಚ್ಚಾಗಿಯೇ ಇರುವುದರಿಂದ ಸಾರ್ವಜನಿಕರು ಅನಿವಾರ್ಯವಾಗಿ ಹೆಚ್ಚು ಬೆಲೆ ನೀಡಿ ತರಕಾರಿ ಖರೀದಿ ಮಾಡುವುದು ಮಾಮೂಲಿಯಾಗಿದೆ. ಇದೇ ಸಂದರ್ಭವನ್ನು ಬಳಸಿಕೊಂಡಿರುವ ದಲ್ಲಾಳಿಗಳು ಗ್ರಾಹಕರಿಂದ ಹೆಚ್ಚು ವಸೂಲಿ ಮಾಡುತ್ತಿದ್ದಾರೆ. ಬೀದಿ ಬದಿ ವ್ಯಾಪಾರಸ್ಥರು ಬಂಡವಾಳ ಹಾಕಿ ದುಬಾರಿ ತರಕಾರಿ ಮಾರಾಟ ಮಾಡಲು ಹಿಂಜರಿಯುತ್ತಿದ್ದಾರೆ. ಒಟ್ಟಾರೆ ಅಕಾಲಿಕವಾಗಿ ಸುರಿದ ಮಳೆ ಎಲ್ಲರನ್ನೂ ಕಂಗೆಡಿಸಿದೆ.

> **ತರಕಾರಿ ದರ ಏರಿಕೆಯಾದರೂ ಅನಿವಾರ್ಯವಾಗಿ ತೆಗೆದುಕೊಳ್ಳಬೇಕಾಗಿದೆ. ಕಡಿಮೆ ಸಂಬಳಕ್ಕೆ ಬರುವ ನಮ್ಮಂತ ಮಧ್ಯಮ ವರ್ಗದ ಜನರಿಗೆ ಇದರಿಂದ ಬಹಳ ತೊಂದರೆಯಾಗುತ್ತದೆ.**
>
> ■ **ಪ್ರದೀಪ್,** ಗ್ರಾಹಕ

> **ಜನ ಮೊದಲು ಕೆಜಿ ಗಟ್ಟಲೇ ತರಕಾರಿ ತೆಗೆದುಕೊಳ್ಳುತ್ತಿದ್ದರು, ಬೆಲೆ ಹೆಚ್ಚಾಗಿದ್ದರಿಂದ ಕಡಿಮೆ ಪ್ರಮಾಣದಲ್ಲಿ ಖರೀದಿ ಮಾಡುತ್ತಿದ್ದಾರೆ. ಇದರಿಂದ ಹಾಕಿದ ಬಂಡವಾಳ ಕೂಡಾ ಮರಳಿ ಸಿಗುತ್ತಿಲ್ಲ.**
>
> ■ **ಮಂಗಳಾ,** ವ್ಯಾಪಾರಿ

ತರಕಾರಿ ಹಾಗೂ ಹೂ ದರ

ತರಕಾರಿ	ಮೊದಲು (ಕೆ.ಜಿ. ರೂ.ಗಳಲ್ಲಿ)	ಪ್ರಸ್ತುತ (ಕೆ.ಜಿ. ರೂ.ಗಳಲ್ಲಿ)
ಈರುಳ್ಳಿ	20	60
ಟೊಮೋಟೊ	20	100
ನುಗ್ಗೆಕಾಯಿ	100	180
ಬೀನ್ಸ್	60	250
ಮೆಣಸಿನಕಾಯಿ	50	80
ಸೊಪ್ಪು (1 ಕಟ್ಟು)	20	35-40
ಗುಲಾಬಿ	120	150

ಸ್ನೇಹ ಮಿಲನ
2021

ಮೈಸೂರಿನಲ್ಲಿ ಗುರುವಾರ ನಡೆದ ಸ್ನೇಹ ಮಿಲನ ಕಾರ್ಯಕ್ರಮದಲ್ಲಿ ಅಖಿಲ ಭಾರತ ಬ್ರಾಹ್ಮಣ ಮಹಾಸಭಾ ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಿರುವ ಹಿರಿಯ ನ್ಯಾಯವಾದಿ ಅಶೋಕ ಹಾರ್ನಳ್ಳಿ ಅವರು ಭಾಗವಹಿಸಿದ್ದರು.

ಸುಗಮ ಸಂಗೀತ ಕಾರ್ಯಾಗಾರ

ಬೆಂಗಳೂರು: ಗಾನಗಂಗಾ ಟ್ರಸ್ಟ್ ವತಿಯಿಂದ ಸುಗಮ ಸಂಗೀತ ಕಾರ್ಯಾಗಾರವನ್ನು ಡಿ.11 ಹಾಗೂ 12ರಂದು ರವಿಂದ್ರ ಕಲಾ ಕ್ಷೇತ್ರದಲ್ಲಿ ಹಮ್ಮಿಕೊಳ್ಳಲಾಗಿದೆ. ನಾಡಿನ ಖ್ಯಾತ ಗಾಯಕರಿಂದ ನಡೆಸಲ್ಪಡುವ ಕಾರ್ಯಾಗಾರದಲ್ಲಿ 16 ವರ್ಷ ವಯೋಮಿತಿ ಮೇಲ್ಪಟ್ಟ, ಕನ್ನಡ ಭಾಷೆಯ ಉಚ್ಚಾರಣೆಯಲ್ಲಿ ಸ್ಪಷ್ಟತೆಯಿರುವ ಆಸಕ್ತಿಯುಳ್ಳ ಅಭ್ಯರ್ಥಿಗಳು ಭಾಗವಹಿಸಲು ಅವಕಾಶವಿದೆ. ಸಂಸ್ಥೆಯಿಂದ ತರಬೇತಿ ಪಡೆದ ವಿದ್ಯಾರ್ಥಿಗಳಿಗೆ ಡಿ.17ರಂದು ನಡೆಯುವ ಕನ್ನಡ ಗೀತ ಗಾಯನ ಕಾರ್ಯಕ್ರಮದಲ್ಲಿ ಸುಗಮ ಸಂಗೀತ ಗಾಯನವನ್ನು ಪ್ರಸ್ತುತ ಪಡಿಸಲು ಅವಕಾಶವಿದೆ. ಹೆಸರು ನೋಂದಾವಣೆಗೆ ದೂ: 9731692822ನ್ನು ಸಂಪರ್ಕಿಸಲು ಕೋರಲಾಗಿದೆ.

ಕಿರು ಸುದ್ದಿ

ಐಒಬಿಯಿಂದ ಸಾಲ ವಿತರಣೆ

ಬೆಂಗಳೂರು: ಇಂಡಿಯನ್ ಓವರ್‌ಸೀಸ್ ಬ್ಯಾಂಕಿನ ಕ್ರೆಡಿಟ್ ಔಟ್‌ರೀಚ್ ಕಾರ್ಯಕ್ರಮವನ್ನು ಗುರುವಾರ ಬೆಂಗಳೂರು ನಗರ ಶಾಖೆಯಲ್ಲಿ ಹಮ್ಮಿಕೊಳ್ಳಲಾಗಿತ್ತು.

ಈ ಸಂದರ್ಭದಲ್ಲಿ ಬ್ಯಾಂಕಿನ ಕಾರ್ಯಪಾಲಕ ನಿರ್ದೇಶಕರಾದ ಎಸ್.ಶ್ರೀಮತಿಯವರು ಎಂಎಸ್‌ಎಂಇ ಹಾಗೂ ರೀಟೇಲ್ಸ್ ಗ್ರಾಹಕರಿಗೆ 40 ಕೋಟಿ ರೂ. ಮೊತ್ತದ ಸಾಲ ಮಂಜೂರಾತಿ ಪ್ರಮಾಣಪತ್ರಗಳನ್ನು ವಿತರಿಸಿದರು. ಬ್ಯಾಂಕಿನ ಅಧಿಕಾರಿಗಳು ಉಪಸ್ಥಿತರಿದ್ದರು.

ಇಂಜಿನಿಯರ್‌ಗಳಿಂದ ವಾಕಥಾನ್

ಬೆಂಗಳೂರು: ಅಸೋಸಿಯೇಷನ್ ಆಫ್ ಕನ್ಸಲ್ಟಿಂಗ್ ಸಿವಿಲ್ ಇಂಜಿನಿಯರ್ಸ್ ವತಿಯಿಂದ ವಾಕಥಾನ್ ಮಹಾರಾಣಿ ಕಾಲೇಜಿನ ಎದುರಿನ ಫ್ರೀಡಂ ಪಾರ್ಕ್‌ನಲ್ಲಿ ಗುರುವಾರ ನಡೆಯಿತು.

ಸಾಮಾಜಿಕ ಕಾರ್ಯಕರ್ತೆ ತೇಜಸ್ವಿನಿ ಅನಂತಕುಮಾರ್ ಮತನಾಡಿ, ಸಿವಿಲ್ ಇಂಜಿನಿಯರಿಂಗ್ ವೃತ್ತಿಗೆ ಶಾಸನ ಒಂದರ ಅಗತ್ಯ ಪ್ರಸ್ತುತ ಸಮಯದಲ್ಲಿ ಬಹಳ ಅಗತ್ಯ ಇದೆ. ವೃತ್ತಿ ಮತ್ತು ಸಮಾಜದ ಒಳಿತಿಗಾಗಿ ವೃತ್ತಿಪರ ಸಿವಿಲ್ ಎಂಜಿನಿಯರ್‌ಗಳ ಕಾಯಿದೆಯನ್ನು ಅಂಗೀಕರಿಸಲು ಪರಿಗಣಿಸಬೇಕು ಎಂದು ಸರ್ಕಾರಕ್ಕೆ ಮನವಿ ಮಾಡಿದರು. ಎಸಿಸಿಇ(ಐ) ಬೆಂಗಳೂರು ಕೇಂದ್ರದ ಅಧ್ಯಕ್ಷ ಶ್ರೀಕಾಂತ್ ಎಸ್. ಚನ್ನಾಲ್ ಮತನಾಡಿ, ಎನ್‌ಬಿಸಿ-2016ರ ನಿಬಂಧನೆಗಳನ್ನು ಸ್ಥಳೀಯ ಕಟ್ಟಡದ ನಿಯಮಗಳಲ್ಲಿ ಅಳವಡಿಸಬೇಕು. ವೃತ್ತಿಪರ ಸಿವಿಲ್ ಇಂಜಿನಿಯರ್‌ಗಳ ಕಾಯಿದೆಯನ್ನು ಘೋಷಿಸಬೇಕು ಎಂದರು.

ನಾಳೆ ಸಪ್ನ ಬುಕ್ ಹೌಸ್‌ನಿಂದ 66 ಕನ್ನಡ ಕೃತಿ ಲೋಕಾರ್ಪಣೆ

ಬೆಂಗಳೂರು: ಸಪ್ನ ಬುಕ್ ಹೌಸ್ ವತಿಯಿಂದ 66ನೇ ಕನ್ನಡ ರಾಜ್ಯೋತ್ಸವ ಪ್ರಯುಕ್ತ 66 ಕನ್ನಡ ಪುಸ್ತಕಗಳ ಲೋಕಾರ್ಪಣಾ ಕಾರ್ಯಕ್ರಮವು ನ.27ರಂದು ಗಾಂಧಿ ಭವನದಲ್ಲಿ ನಡೆಯಲಿದೆ .

ಅಂದು ಬೆಳಿಗ್ಗೆ 10.15ಕ್ಕೆ ಸಿಎಂ ಬಸವರಾಜ ಬೊಮ್ಮಾಯಿ ಅವರು ಪುಸ್ತಕಗಳನ್ನು ಲೋಕಾರ್ಪಣೆಗೊಳಿಸಲಿದ್ದಾರೆ. ಕನ್ನಡ ಸಂಸ್ಕೃತಿ ಇಲಾಖೆ ಸಚಿವ ವಿ. ಸುನಿಲ್ ಕುಮಾರ್, ಸಾಹಿತಿಗಳಾದ ನಾಡೋಜ ಡಾ. ಕಮಲಾ ಹಂಪನಾ, ಡಾ. ಎಚ್.ಎಸ್ ವೆಂಕಟೇಶ ಮೂರ್ತಿ, ವಿಮರ್ಶಕ ಡಾ. ಸಿ. ಎನ್ ರಾಮಚಂದ್ರನ್ ಭಾಗವಹಿಸಲಿದ್ದಾರೆ.

ಜನಸೇವಕ ಕಾರ್ಯಕ್ರಮ ಅನುಷ್ಠಾನ

ಬೆಂಗಳೂರು: ಕರ್ನಾಟಕ ರಾಜ್ಯ ಸರಕಾರದ ಸೇವಾ ಸಿಂಧು ಯೋಜನೆಯ ಜನಸೇವಕ ಕಾರ್ಯಕ್ರಮವನ್ನು ಪ್ರಥಮ ಬಾರಿಗೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ(ಬಿಬಿಎಂಪಿ) ಯಲಹಂಕ ವಲಯದ ಬ್ಯಾಟರಾಯನಪುರದಲ್ಲಿ ಅನುಷ್ಠಾನಗೊಳಿಸಲಾಯಿತು.

ಬಿಬಿಎಂಪಿ ಆಡಳಿತ ವಿಶೇಷ ಆಯುಕ್ತ ಡಾ.ದಯಾನಂದ್, ಸಕಾಲ ನಿರ್ದೇಶಕ ವರಪ್ರಸಾದ್ ರೆಡ್ಡಿ, ಯಲಹಂಕ ವಲಯ ಜಂಟಿ ಆಯುಕ್ತೆ ಪೂರ್ಣಿಮಾ, ಉಪ ಆಯುಕ್ತ ಶಿವೇಗೌಡ ಉಪಸ್ಥಿತರಿದ್ದರು.

ನಾಳೆ ಪ್ಯಾರಾ ಬ್ಯಾಡ್ಮಿಂಟನ್ ಚಾಂಪಿಯನ್‌ಶಿಪ್

ಬೆಂಗಳೂರು: ಕರ್ನಾಟಕ ರಾಜ್ಯ ಅಂಗವಿಕಲರ ಕ್ರೀಡಾ ಸಂಸ್ಥೆಯ ವತಿಯಿಂದ ಜೆ.ಪಿ ನಗರದ ಸ್ಕೈಫಿಂಚ್ ಸ್ಪೋರ್ಟ್ಸ್ ಸೆಂಟರ್‌ನಲ್ಲಿ ನ.27ರಂದು ರಾಜ್ಯ ಮಟ್ಟದ ಪ್ಯಾರಾ ಬ್ಯಾಡ್ಮಿಂಟನ್ ಚಾಂಪಿಯನ್ ಶಿಪ್ ನಡೆಯಲಿದೆ.

ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಕೆ.ಗೋಪಿನಾಥ್, ವಿಶೇಷಚೇತನರು ಸ್ವಾವಲಂಬಿಗಳಾಗಿ ಬೆಳೆಯಲು ಹಾಗೂ ಗ್ರಾಮೀಣ ಭಾಗದ ಪ್ಯಾರಾ ಕ್ರೀಡಾಪಟುಗಳು ಸಮಾಜದ ಮುಖ್ಯವಾಹಿನಿಯಲ್ಲಿ ಗುರುತಿಸಿಕೊಳ್ಳಲು ಪಂದ್ಯಾವಳಿಯು ಸಹಕಾರಿಯಾಗಲಿದೆ ಎಂದರು. ರಾಜ್ಯದ ವಿವಿಧ ಜಿಲ್ಲೆಗಳಿಂದ ಆಟಗಾರರು ಆಗಮಿಸಲಿದ್ದು, ಪಂದ್ಯಾವಳಿಯು ಬೆಳಿಗ್ಗೆ 10.30ಕ್ಕೆ ಉದ್ಘಾಟನೆಗೊಳ್ಳಲಿದೆ. ಉತ್ತಮ ಪ್ರದರ್ಶನ ತೋರಿದ ಕ್ರೀಡಾಪಟುಗಳು 4ನೇ ರಾಷ್ಟ್ರೀಯ ಪ್ಯಾರಾ ಬ್ಯಾಡ್ಮಿಂಟನ್ ಚಾಂಪಿಯನ್‌ಶಿಪ್‌ಗೆ ಅರ್ಹತೆ ಪಡೆಯಲಿದ್ದಾರೆ ಎಂದು ಅವರು ತಿಳಿಸಿದರು. ಸಂಸ್ಥೆಯ ಜಂಟಿ ಕಾರ್ಯದರ್ಶಿ ಮಾದೇಶ್ ಚಂದ್ರ , ಉಪಾಧ್ಯಕ್ಷ ಮಹೇಶ್ ಗೌಡ ಉಪಸ್ಥಿತರಿದ್ದರು.

ಇಂದು ಸುಷ್ಮಾ .ಸಿ.ಎಲ್ ರಂಗಪ್ರವೇಶ

ಬೆಂಗಳೂರು: ನರ್ತನ ಕೀರ್ತನ ವತಿಯಿಂದ ಶುಕ್ರವಾರ ಸಂಜೆ 5.30ಕ್ಕೆ ಜೆ.ಎಸ್. ಆಡಿಟೋರಿಯಂನಲ್ಲಿ ಸುಷ್ಮಾ .ಸಿ.ಎಲ್ ಅವರ ರಂಗಪ್ರವೇಶ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

ಡಾ.ಸೌಂದರ್ಯ ಶ್ರೀವತ್ಸ ಅವರ ಶಿಷ್ಯೆಯಾಗಿರುವ ಸುಷ್ಮಾ ಅವರು ಅನೇಕ ವರ್ಷಗಳಿಂದ ನೃತ್ಯಾಭ್ಯಾಸವನ್ನು ಮಾಡುತ್ತಾ ಬಂದಿದ್ದಾರೆ. ಇವರ ಈ ರಂಗಪ್ರವೇಶ ಕಾರ್ಯಕ್ರಮದಲ್ಲಿ ಡಾ. ಶೊಭಾ ಶಶಿಕುಮಾರ್, ಡಾ.ಆರ್.ರಾಘವೇಂದ್ರ ಮತ್ತು ಗುರು ಶೀಲ ಚಂದ್ರಶೇಖರ್ ಉಪಸ್ಥಿತರಿರಲಿದ್ದಾರೆ.